For More Job News Visit : www.kpscvaani.com

ಕೆಪಿಸಿ ಅನಿಲ ವಿದ್ಯುತ್ ನಿಗಮ ನಿಯಮಿತ, ಯಲಹಂಕ

(ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಒಂದು ಅಧೀನ ಸಂಸ್ಥೆ)

ಯಲಹಂಕ ಸಂಯುಕ್ತ ಆವರ್ತ ಅನಿಲ ವಿದ್ಯುತ್ ಘಟಕ

ಸಿಐಎನ್: U40102KA1996SGC020337

ಸಂಖ್ಯೆ: ಎ14ಪಿಎಸ್1/249

ಅಧಿಸೂಚನೆ

ದಿನಾಂಕ: 20.08.2020

ಶಿಶಿಕ್ಷು ತರಬೇತಿ – ಕುರಿತು

ಶಿಶಿಕ್ಷು ಕಾಯಿದೆ 1961ರ ಮೇರೆಗೆ 2020 ನೇ ಸಾಲಿನ ಅಕ್ಟೋಬರ್ ಅವಧಿಗೆ ಕೆಪಿಸಿಎಲ್ ಗ್ಯಾಸ್ ಪವರ್ ಕಾರ್ಪೊರೇಶನ್, ಯಲಹಂಕದಲ್ಲಿ ಈ ಕೆಳಕಂಡ ವೃತ್ತಿಯಲ್ಲಿ ಶಿಶಿಕ್ಷು ತರಬೇತಿಗೆ (Apprenticeship Training) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಶಿಶಿಕ್ಷು ವೃತ್ತಿ	ವಿದ್ಯಾರ್ಹತೆ	ಅಭ್ಯರ್ಥಿಗಳ ಸಂಖ್ಯೆ	ತರಬೇತಿ ಅವಧಿ	ಮಾಸಿಕ ತರಬೇತಿ ಭತ್ಯೆ ರೂ.
1	ಐಟಿಐ (ಇಲೆಕ್ಟ್ರೀಷಿಯನ್)	ಐಟಿಐ (ಇಲೆಕ್ಟ್ರೀಷಿಯನ್)	03	1 ವರ್ಷ	10,000/-
2	ಐಟಿಐ (ಫಿಟ್ಟರ್)	ಐಟಿಐ (ಫಿಟ್ಟರ್)	03	1 ವರ್ಷ	10,000/-
3	ಅಸ್ಸಿಸ್ಟಂಟ್ ಫ್ರಂಟ್ ಆಫೀಸ್ ಮ್ಯಾನೇಜರ್	ಎಸ್.ಎಸ್.ಎಲ್.ಸಿ.	06	1 ವರ್ಷ 03 ತಿಂಗಳು	7,000/-
		ಒಟ್ಟು	12		

ಐಟಿಐ/ಐಟಿಐಯೇತರ ಶಿಶಿಕ್ಷು ತರಬೇತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು www.apprenticeship.gov.in ಈ ವೆಬ್‌ಸೈಟಿನಲ್ಲಿ ಮೊದಲು ನೋಂದಣಿ ಮಾಡಿಕೊಂಡು ನಂತರ KPCL GAS POWER CORPORATION YELAHANKA COMBINED CYCLE POWER PLANT ಎಸ್ಟಾಬ್ಲಿಷ್‌ಮೆಂಟ್ [E08182900421] ಗೆ ದಿನಾಂಕ: **10.09.2020** ರೊಳಗೆ ತಮ್ಮ ವೃತ್ತಿಗನುಗುಣವಾಗಿ ಆಯಾ ವೃತ್ತಿಗಳಲ್ಲೇ ಅರ್ಜಿಗಳನ್ನು ಸಲ್ಲಿಸತಕ್ಕದ್ದು. **ಈ ತರಬೇತಿಯ ನಂತರ ಶಿಶಿಕ್ಷುಗಳನ್ನು ಬಿಡುಗಡೆಗೊಳಿಸಲಾಗುವುದು ಹಾಗೂ ಯಾವುದೇ ಸಂದರ್ಭದಲ್ಲಿ ನಿಗಮದ ಖಾಯಂ ಸೇವೆಗೆ ಪರಿಗಣಿಸಲಾಗುವುದಿಲ್ಲ.**

ಸೂಚನೆ: 1. ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಆಫ್‌ಲೈನ್ ಮೂಲಕ ಸಲ್ಲಿಸಿದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 2. ಅಭ್ಯರ್ಥಿಗಳು ಕಡ್ಡಾಯವಾಗಿ ಚಾಲ್ತಿಯಲ್ಲಿರುವ ತಮ್ಮ ಸ್ವಂತ ಇ-ಮೇಲ್ ಐಡಿಯನ್ನು ಮಾತ್ರ ಅರ್ಜಿಯಲ್ಲಿ ಭರ್ತಿ ಮಾಡತಕ್ಕದ್ದು. ತರಬೇತಿಯ ಎಲ್ಲಾ ಪತ್ರ ವ್ಯವಹಾರವನ್ನು ನೀವು ನೀಡಿದಂತಹ ಇ-ಮೇಲ್ ಐಡಿ ಮುಖಾಂತರ ಮಾಡಲಾಗುವುದು. 3. ಈ ಮೊದಲು ಶಿಶಿಕ್ಷು ತರಬೇತಿ ಪಡೆದವರು ಪುನಃ ತರಬೇತಿಗೆ ಅರ್ಹರಿರುವುದಿಲ್ಲ. 4. ಆನ್‌ಲೈನ್ ಅರ್ಜಿಗಳಲ್ಲಿ ಅಭ್ಯರ್ಥಿಗಳ ಮಾಹಿತಿಯು ಅಪೂರ್ಣವಾಗಿದ್ದಲ್ಲಿ ಅಂತಹ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ (ಬೆಳಗ್ಗೆ 10.00 ರಿಂದ ಸಂಜೆ 05.30 ರವರೆಗೆ ಮಾತ್ರ) ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ. ಮೊಬೈಲ್: 9738782443, 9008901376.

ಸಹಿ/-ಎಜಿಎಂ(ಪರ್ಸ್‌ಆರ್‌ಡಿ)ವ್ಯೆ, ಕೆಪಿಸಿಎಲ್ ಗ್ಯಾಸ್ ಪವರ್ ಕಾರ್ಪೋರೇಷನ್, ಯಲಹಂಕ